**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಃ ಉತ್ತರ ಕನ್ನಡ ಃ ಕಾರವಾರ**

**ಸೆಷನ್ಸ್ ಕೇಸ್ ನಂಃ 36/2014**

**ಫಿರ್ಯಾದಿ** ಃ ಸರ್ಕಾರ ಃ ಕದ್ರಾ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿತರು** ಃ ಗುಸ್ತಿನ್ ಯಾನೆ ಗ್ರೇಗರಿ ಯಾನೆ ಗಿರಿ
ತಂದೆಃ ಅಲ್ವಿನ್ ಡಿ'ಕೋಸ್ಟಾ

## **ದೋಷಾರೋಪಣೆ**

ಶ್ರೀ ವಿ.ಎಸ್.ಧಾರವಾಡಕರ್, ಬಿ.ಕಾಂ.,ಎಲ್.ಎಲ್.ಬಿ., (ಸ್ಪೆಷಲ್), ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ ಆದ ನಾನು

1. ಗುಸ್ತೀನ್ ಯಾನೆ ಗ್ರೇಗರಿ ಯಾನೆ ಗಿರಿ
   ತಂದೆಃ ಅಲ್ವಿನ್ ಡಿ'ಕೋಸ್ಟಾ,
   23 ವರ್ಷ,
   ಸಾಃ ಚರ್ಚವಾಡಾ, ಕದ್ರಾ

ನಿಮ್ಮ ಮೇಲೆ ಆಪಾದಿಸುವುದೇನೆಂದರೆಃ

ದಿನಾಂಕಃ 14-02-2014 ರಂದು ರಾತ್ರಿ 9-30 ಗಂಟೆ ಸುಮಾರಿಗೆ ಆರೋಪಿಯಾದ ನೀನು ಕದ್ರಾ ರಾಜಾಜಿನಗರ ನಿವಾಸಿ ವೇಲು ತಂದೆಃ ಇಲ್ಲನ್‌ಗುಡಿ ಈತನ ಮನೆಯ ಹತ್ತಿರ ಹೋಗಿ ಫೋನ್ ಮಾಡಿ ಉಳಿದ ಹಣ ಕೊಡುವುದಾಗಿ ಹೇಳಿ ಕರೆದಿದ್ದರಿಂದ ಆತನು ತನ್ನ ಮಗ ಸತ್ಯನಾರಾಯಣ ಮೂರ್ತಿಗೆ ಜೊತೆ ಮಾಡಿಕೊಂಡು ನಿನ್ನೊಂದಿಗೆ ಬಂದಾಗ ಅವರನ್ನು ಮನೆಯ ಪಕ್ಕದಲ್ಲಿರುವ ಅರಣ್ಯ ಪ್ರದೇಶದಲ್ಲಿ ಕರೆದುಕೊಂಡು ಹೋಗಿ ಕೊಲೆ ಮಾಡುವ ಉದ್ದೇಶದಿಂದಲೇ ಅಡ್ಡಬಿದ್ದ ಮರದ ಹತ್ತಿರ ಮೊದಲೇ ಕತ್ತಿಯನ್ನು ಬಚ್ಚಿಟ್ಟ ಸ್ಥಳಕ್ಕೆ ಜಂಗಲದಲ್ಲಿ ಕರೆದುಕೊಂಡು ಹೋಗಿ ಕತ್ತಿಯಿಂದ ಒಮ್ಮೇಲೆ ವೇಲುವಿನ ಕುತ್ತಿಗೆಯ ಹಿಂಭಾಗಕ್ಕೆ ಕಡಿದು ನೆಲಕ್ಕೆ ಬಿದ್ದ ಮೇಲೆ ಆತನ ಕುತ್ತಿಗೆಯ ಮುಂಭಾಗಕ್ಕೆ ಕತ್ತಿಯಿಂದ ಎರಡು ಬಾರಿ ಕಡಿದು ಕೊಲೆ ಮಾಡಿದೆ ಮತ್ತು ಅಲ್ಲಿದ್ದ ಆತನ ಮಗ ಸತ್ಯನಾರಾಯಣ ಮೂರ್ತಿ ಕೂಗುತ್ತಾ ಮನೆಯ ಕಡೆಗೆ ಓಡುತ್ತಿದ್ದವನಿಗೆ ಅದೇ ಕತ್ತಿಯಿಂದ ಕಡಿದು ಕೊಲೆ ಮಾಡಿದೆ ಮತ್ತು ನಂತರ ವೇಲು ಮನೆಯಿಂದ ಹೊರಬರುವಾಗ ಆತನ ಹೆಂಡತಿ

22ನೇ ಸಾಕ್ಷಿ ಜಾನಕಿ ಮತ್ತು ಮಗಳು ಅಶ್ವಿನಿ ನೋಡಿದ್ದರಿಂದ ಮುಂದೆ ತೊಂದರೆ ಆಗಬಹುದೆಂದು ಪುನಃ ವೇಲು ಮನೆಯ ಹತ್ತಿರ ಹೋಗಿ ಕರೆಂಟ ವಾಯರನ್ನು ಕಟ್ ಮಾಡಿ ಮನೆ ಬಾಗಿಲು ಬಡಿದು, ಬಾಗಿಲು ತೆಗೆದ ಜಾನಕಿಗೆ ಮಗಳನ್ನು ತನ್ನ ಜೊತೆ ಕಳುಹಿಸಲು ಹೇಳಿದಾಗ ಆಕೆ ಇಲ್ಲವೆಂ ದಿದ್ದರಿಂದ ಆಕೆಯ ಕುತ್ತಿಗೆ ಹತ್ತಿರ ಹೊಡೆದಾಗ ಆಕೆ ತಪ್ಪಿಸಿಕೊಳ್ಳಲು ಎಡಗೈ ಅಡ್ಡ ಮಾಡಿದ್ದರಿಂದ ಎಡಗೈ ಮುಂಗೈ ಗಂಟಿನ ಹತ್ತಿರ ಕಡಿದು ಕೈಕತ್ತರಿಸಿ, ತಲೆಗೆ ಗಾಯಪಡಿಸಿದ್ದರಿಂದ ಆಕೆ ಕುಸಿದು ಬಿದ್ದಾಗ ಮಗಳು ಅಶ್ವಿನಿ ಕೂಗಿಕೊಂಡಿದ್ದರಿಂದ ಕೈಯಲ್ಲಿದ್ದ ಅದೇ ಕತ್ತಿಯಿಂದ ಅವಳ ಎಡಗೈ ಮುಂಗೈ ಸಹಿತ ಕುತ್ತಿಗೆಗೆ ಕಡಿದು ಕೊಲೆ ಮಾಡಿದೆ ಮತ್ತು ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 302 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ಸೆಷನ್ಸ್ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿ.

ಎರಡನೇಯದಾಗಿ, ಮೇಲೆ ಹೇಳಿದ ದಿನ, 10-30 ಗಂಟೆ ಸುಮಾರಿಗೆ ಅರೋಪಿಯಾದ ನೀನು ವೇಲು ಮನೆಯ ಹತ್ತಿರ ಹೋಗಿ ಕರೆಂಟ ವಾಯರನ್ನು ಕಟ್ ಮಾಡಿ ಮನೆ ಬಾಗಿಲು ಬಡಿದು, ಬಾಗಿಲು ತೆಗೆದ ಜಾನಕಿಗೆ ಮಗಳನ್ನು ತನ್ನ ಜೊತೆ ಕಳುಹಿಸಲು ಹೇಳಿ ಆಕೆ ಇಲ್ಲವೆಂದಿದ್ದರಿಂದ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದಲೇ ಅವಳ ಕುತ್ತಿಗೆ ಹತ್ತಿರ ಹೊಡೆದು ಎಡಗೈ ಮುಂಗೈ ಗಂಟಿನ ಹತ್ತಿರ ಕಡಿದು ಕೈಕತ್ತರಿಸಿ, ತಲೆಗೆ ಕಡಿತದ ಗಾಯಮಾಡಿ ಮಾಡಿ ಗಂಭೀರ ಸ್ವರೂಪದ ಗಾಯನೋವನ್ನುಂಟು ಮಾಡಿದಿರಿ ಮತ್ತು ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 307 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ಸೆಷನ್ಸ್ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀನು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 15 ನೇ ಸೆಪ್ಟಂಬರ್ 2017.

(ವಿ.ಎಸ್. ಧಾರವಾಡಕರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.

ಉತ್ತರ ಕನ್ನಡ, ಕಾರವಾರ

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಃ ಉತ್ತರ ಕನ್ನಡ ಃ ಕಾರವಾರ**

**ಸೆಷನ್ಸ್ ಕೇಸ್ ನಂಃ 36/2014**

**ಫಿರ್ಯಾದಿ** ಃ ಸರ್ಕಾರ ಃ ಕದ್ರಾ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿ** ಃ ಗುಸ್ತಿನ್ ಯಾನೆ ಗ್ರೇಗರಿ ಯಾನೆ ಗಿರಿ
ತಂದೆಃ ಅಲ್ವೀನ್ ಡಿ'ಕೋಸ್ಟಾ

ಆರೋಪಿಯ ಹೆಸರು ಃ ಗಸ್ತಿನ್ ಯಾನೆ ಗ್ರೇಗರಿ ಯಾನೆ ಗಿರಿ

ತಂದೆಯ ಹೆಸರು ಃ ಅಲ್ವೀನ್ ಡಿ'ಕೋಸ್ಟಾ

ವಯಸ್ಸು ಃ

ಉದ್ಯೋಗ ಃ

ವಾಸ ಃ

**ಆರೋಪಿಯ ಹೇಳಿಕೆ**

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಗಳು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?

ಉತ್ತರಃ

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 15 ನೇ ಸೆಪ್ಟಂಬರ್ 2017.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
ಉತ್ತರ ಕನ್ನಡ, ಕಾರವಾರ